

# ದಿಂಬಿನಡಿಯಲ್ಲೊಂದು ವಿಷಸರ್ಪ

■ ಯಂಡಮೂರಿ ವೀರೇಂದ್ರನಾಥ್
ಕನ್ನಡಕ್ಕೆ: ಸಂಡೂರು ವೆಂಕಟೇಶ್
ಕಲೆ: ಮನೋಹರ್ ಆಚಾರ್ಯ

## ಕಲ್ಯಾಣಿ–ಕೃಷ್ಣ ಮದುವೆ

'ಆ ಬ್ಯಾಂಕ್ ಆಫೀಸರ್‌ನ ಹೆಂಡತಿ ಬಗ್ಗೆ ಎಲ್ಲ ವಿವರ ಶೇಖರಿಸಿದಾಗ ಒಂದು ವಿಷಯ ಬಯಲಾಯ್ತು. ಕೇಳಿದರೆ ನಿಮಗೆ ಶಾಕ್ ಆದೀತು' ಎಂದರು ಚೀಫ್. ಅವರೇನು ಹೇಳುತ್ತಾರೋ ಎಂದು ಕುತೂಹಲದಿಂದ ಎಲ್ಲ ಆಫೀಸರ್‌ಗಳು ಅವರ ಕಡೆ ನೋಡಿದರು.

'ಬ್ಯಾಂಕ್ ಆಫೀಸರ್ ಹೆಂಡತಿಯ ಫೋನ್‌ನಿಂದ ಕಾರ್ಗಿಲ್ ಪಕ್ಕದಲ್ಲಿರುವ ಡ್ರಾಸ್ ಎಂಬ ಊರಿಗೆ ಬಹಳ ಫೋನ್ ಕಾಲ್ಸ್ ಹೋಗಿವೆ'

'ಕಾರ್ಗಿಲ್ ಎಲ್ಲಿದೆ?' ಕೇಳಿದನು ಕುಕ್ಕುಟೇಶ್ವರ ಸ್ವಾಮಿ.

'ಇಪ್ಪತ್ತೈದು ವರ್ಷದಿಂದ ನಿನಗೇಕೆ ಪ್ರೊಮೋಷನ್ ಸಿಕ್ಕಿಲ್ಲ ಅಂತ ಈಗ ಅರ್ಥವಾಯ್ತು. ಡಿಫೆನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿರುವ ನೀನು 'ಕಾರ್ಗಿಲ್ ಎಲ್ಲದೆ? ಅಂತ ಕೇಳ್ತೀಯಾ? ಕಾರ್ಗಿಲ್ ಇರುವುದು ಕಾಶ್ಮೀರದಲ್ಲಿ... ಇನ್ನೂ ಕರೆಕ್ಟಾಗಿ ಹೇಳಬೇಕೆಂದರೆ ಲೇಹ್‌ನಲ್ಲಿ'

ಅವರ ವ್ಯಂಗ್ಯಕ್ಕೆ ಗಮನ ಕೊಡದೆ 'ಅವಳು ಕೂಡ ಉಗ್ರವಾದಿಯಾ?' ಎಂದು ಕೇಳಿದನು ಸ್ವಾಮಿ.

'ಆ ವಿವರಗಳನ್ನು ಕರೆಕ್ಟ್ ಮಾಡುವುದಕ್ಕೆ ಕಲ್ಯಾಣಿ–ಕೃಷ್ಣ ಕಾಶ್ಮೀರ್‌ಗೆ ಹೋಗಿದ್ದಾರೆ. ಒಟ್ಟಿನಲ್ಲಿ ಇದೊಂದು ಶಾಕಿಂಗ್ ನ್ಯೂಸ್'

'ಅದಕ್ಕಿಂತ ದೊಡ್ಡ ಶಾಕ್ ಯಾವುದು ಗೊತ್ತಾ?' ಸ್ವಾಮಿ ಕೇಳಿದನು.

'ಯಾವುದು?'

'ಕಲ್ಯಾಣಿ–ಕೃಷ್ಣ ಮದುವೆ ಆಗಬೇಕೆಂದಿದ್ದಾರೆ'

ಕೇಳುತ್ತಿದ್ದ ಆಫೀಸರ್‌ಗಳು ಬೆಚ್ಚಿಬಿದ್ದರು. 'ಕೃಷ್ಣ ಕಲ್ಯಾಣಿ ಮದುವೆ ಆಗ್ತಿದ್ದಾರಾ? ಆ ವಿಷಯ ನಮಗೆ ತಿಳಿಸಲೇ ಇಲ್ಲವಲ್ಲ' ಎಂದನು ಒಬ್ಬ ಆಫೀಸರ್.

'ನೆನ್ನೆ ಸ್ವತಃ ಕಾಶ್ಮೀರ್‌ದಿಂದ ಫೋನ್ ಮಾಡಿ ಕೃಷ್ಣನೇ ಹೇಳಿದ'

'ಮದುವೆ ಆಗುತ್ತಾರಾ? ಸಹ ಜೀವನವಾ?'

'ಮದುವೆ ಅಂತ ಹೇಳ್ತಿದ್ದಾರೆ, ಆದರೆ ಲಿವಿಂಗ್ ಟುಗೆದರ್ ಆಗಿರಬಹುದು. ಇತ್ತೀಚೆಗೆ ಎಲ್ಲರಿಗೂ ಇದೊಂದು ಫ್ಯಾಷನ್ ಆಗಿ ಬಿಟ್ಟಿದೆ'

'ಕಾಶ್ಮೀರ್ ಚಳಿಯಲ್ಲಿ ಒಬ್ಬರಿಗೊಬ್ಬರು ಪ್ರೊಪೋಸ್ ಮಾಡಿಕೊಂಡಿರುತ್ತಾರೆ ಬಿಡಿ'